**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5037/2023 ಫ್ರಾಸಾ-15
ಚಾಸಾ-18

ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಷಬಾಜ್ |
| **ತಂದೆಯ / ಗಂಡನ ಹೆಸರು** | ಸೈಯದ್ ಷಬಾಜ್ |
| **ವಯಸ್ಸು** | 30 |
| **ಉದ್ಯೋಗ** | ಚಾಲಕ |
| **ವಾಸಸ್ಥಳ** | ಪಾವಗಡ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಿಪಿ-5 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. 2 ವರ್ಷಗಳ ಹಿಂದೆ ಪಾವಗಡ ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ ನಾನು ಸಹಿ ಮಾಡಿರುತ್ತೇನೆ. ಒಬ್ಬ ಹೆಂಗಸಿನ ಸಾವು ಆಗಿದ್ದು ಅದರ ಬಗ್ಗೆ ನಾನು ಸಹಿ ಹಾಕಿರುತ್ತೇನೆ. ಶವವನ್ನು ನೋಡಿದಾಗ ತಲೆಗೆ ಬಾರಿ ಗಾಯವಾಗಿತ್ತು, ಪೊಲೀಸರು ಪೊಟೋ ತೆಗೆದಿರುತ್ತಾರೆ. ಪೊಟೋ ನೋಡಿದರೆ ಗುರುತಿಸುತ್ತೇನೆ. ನಿಪಿ-6 ರಿಂದ 8 ಪೊಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ-6 ರ ಪೊಟೋದಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಲಕ್ಷ್ಮೀ ಅವಳ ಗಂಡ ಅವಳಿಗೆ ಹೊಡೆದಿರುತ್ತಾನೆಂದು ಗೊತ್ತಾಯಿತು. ಕೌಟುಂಬಿಕ ವಿಷಯಕ್ಕೆ ಆರೋಪಿ ತನ್ನ ಹೆಂಡತಿಯನ್ನು ಹೊಡೆದು ಸಾಯಿಸಿರುತ್ತಾನೆಂದು ಗೊತ್ತಾಗಿರುತ್ತದೆ.

**ಪಾಟೀಸವಾಲು . ಆರೋಪಿ ಪರ ಶ್ರೀ ಪಿ.ಎನ್.ಆರ್. ವಕೀಲರಿಂದ**

ನಾನು ಆಸ್ಪತ್ರೆಗೆ ಏನೋ ಕೆಲಸ ಇದುದ್ದರಿಂದ ಹೋಗಿರುತ್ತೇನೆ. ಪಂಚರಾಗಿ ಬರುವಂತೆ ಪೊಲೀಸರು ನನಗೆ ನೋಟೀಸು ಕೊಟ್ಟಿರುವುದಿಲ್ಲ. ಕೌಟುಂಬಿಕ ವಿಷಯಕ್ಕೆ ಗಂಡ ಮೃತಳವನ್ನು

ಹೊಡೆದಿರುತ್ತಾನೆ ಎಂದು ಅಲ್ಲಿ ಪೊಲೀಸರು ಮಾತನಾಡಿಕೊಳ್ಳುತಿದ್ದರು.

ಮೃತಳ ಗಂಡನ ಹೆಸರನ್ನು ಹೇಳಿರುವುದಿಲ್ಲ. ಆ ಸಮಯದಲ್ಲಿ ನನ್ನ ಜೊತೆ ನಾನು , ಮನ್ಸೂರ್ ಮತ್ತು ವಿಕ್ರಂ ಹಾಜರಿದ್ದೇವು. ನಾನು ಆ ದಿನ ಆಸ್ಪತ್ರೆಗೆ ಹೋಗಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**